





(8ನೇ ಪುಟದಿಂದ)

ಅಮೆರಿಕದಲ್ಲಿ ಈ ತರಕಾರಿಗೆ ಒಳ್ಳೆಯ ಬೇಡಿಕೆ ಇದೆ. ಅಮೆರಿಕದ ಜನರು ಇದನ್ನು ಬಹಳ ಇಷ್ಟಪಟ್ಟು ಸೂಪ್, ಸಲಾಡ್, ಸ್ಯಾಂಡ್‌ವಿಚ್ ಮುಂತಾದವುಗಳಿಗೆ ಬಳಸುತ್ತಾರೆ. ಹಸಿಯಾಗಿ ತಿನ್ನಲು ಇಷ್ಟವಿಲ್ಲದವರು ಬೇಯಿಸಿ ತಿನ್ನುತ್ತಾರೆ. ಸಾಂಬಾರ್, ಪಲ್ಯ, ಹುಳಿ ಮಾತ್ರವಲ್ಲದೆ ಪಾಯಸ, ಹಲ್ವ ಕೂಡ ತಯಾರಿಸಬಹುದು.

ಬೀಜ ಬಿತ್ತಿ ಕೆಲವೇ ದಿನಗಳಲ್ಲಿ ಮೊಳಕೆ ಬರುತ್ತದೆ. ಮಳೆಗಾಲದ ತರಕಾರಿಯಾಗಿ ಅಂಗಳದಲ್ಲಿ ಬೆಳೆಸಬಹುದಾದರೂ ಬೇಸಿಗೆಯಲ್ಲಿ ಚೆನ್ನಾಗಿ ಬರುತ್ತದೆ.  ಬಟರ್‌ನಟ್‌ನ ಬಳ್ಳಿಗಳನ್ನು ಚಪ್ಪರಕ್ಕೆ ಹಬ್ಬಿಸಬಹುದು ಅಥವಾ ಜಾಗ ಇದ್ದಲ್ಲಿ ನೆಲದಲ್ಲೇ ಬಿಡಬಹುದು. ಗಂಡು ಹಾಗೂ ಹೆಣ್ಣು ಹೂಗಳ ಪ್ರತ್ಯೇಕತೆಯನ್ನು ಬೇಗನೆ ಗುರುತಿಸಬಹುದಾಗಿದ್ದು, ಕಾಯಿ ಸರಿಯಾಗಿ ಬೆಳೆಯಲು ಕೈಯಿಂದ ಪರಾಗಸ್ಪರ್ಶ ನಡೆಸಬೇಕಾದ ಅಗತ್ಯ ಇದೆ. ಎಳೆಯ ಮಿಡಿಗಳು ತುಸು ಹಸಿರು ಬಣ್ಣವಿರುತ್ತವೆ, ಬಲಿತಂತೆ ಹಳದಿ ಬಣ್ಣಕ್ಕೆ ತಿರುಗುತ್ತವೆ. ಬಟರ್‌ನಟ್ ಬೆಳೆದಂತೆ ಒಳಭಾಗದ ತಿರುಳು ದಟ್ಟ ಹಳದಿ ಬಣ್ಣ ತಳೆಯುತ್ತದೆ.

ಅಮೆರಿಕದ ತರಕಾರಿಯಾದರೂ ನಮ್ಮೂರಿನಲ್ಲಿ ಚೆನ್ನಾಗಿ ಬೆಳೆಯುತ್ತದೆ. ಹೆಚ್ಚಿನ ಕೀಟಬಾಧೆಯೇನೂ ಇದಕ್ಕೆ ಕಂಡುಬರುವುದಿಲ್ಲ. ಸಾವಯವ ವಿಧಾನದಲ್ಲಿ ಬೆಳೆಸಿದ ಬಟರ್‌ನಟ್ ಕಾಯಿಗಳನ್ನು ಒಂದು ವರ್ಷದ ತನಕ ಕಾಯ್ದಿಡಬಹುದು.